mation and Publicity ಗೆ 10 ಲಕ್ಷದ, 50 ಸಾವಿರ ರೂಪಾಯಿಗಳು. Civil and electrical works entrusted by the Youth Services Department Rs. 21,88,000/- Civil and electrical works entrusted to Horticulture department ಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತೆ ರವೀಂದ್ರ ಕಲಾಕ್ಷೇತ್ರದ ರಿಪೇರಿ ಕೆಲಸಅದೆಲ್ಲಾ ಇದರಲ್ಲಿ ಸೇರಿದೆ. ಅದನ್ನು ಉದ್ಘಾಟನೆ ಮಾಡಿದಾಗಿನಿಂದಲೂ ರಿಪೇರಿಯನ್ನೇ ಮಾಡಿರಲಿಲ್ಲ. ಅದರಲ್ಲಿ ಕೆಲವು ಸಾಮಾನುಗಳನ್ನು ನಾವು ಹೊಸದಾಗಿ ಕೊಂಡು ಕೊಂಡು ಅಳವಡಿಸಿದ್ದೇವೆ. ಅದಕ್ಕೆ 24 ಲಕ್ಷ ರೂಪಾಯಿಗಳು ಖರ್ಚು ಆಗಿದೆ. ಇದನ್ನೆಲ್ಲಾ ಲೋಕೋಪಯೋಗಿ ಇಲಾಖೆಯವರೇ ಖರ್ಚುಮಾಡುತ್ತಿದ್ದಾರೆ. ಅವರೇ ಲೆಕ್ಕ ಕೊಟ್ಟಿದ್ದಾರೆ. ಅದಕ್ಕೆ99 ಲಕ್ಷ 23 ಸಾವಿರ ರೂಪಾಯಿ ಖರ್ಚುಮಾಡಿದ್ದೇವೆ. ಇದು ಈ 3 ಕೋಟಿ ರೂಪಾಯಿಯಲ್ಲಿ ಸೇರಿಕೊಂಡಿದೆ. ಇಷ್ಟನ್ನು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಹಾಗೂ ಮಾನ್ಯ ಯಡಿಯೂರಪ್ಪನವರಿಗೆ ತಿಳಿಸಬಯಸುತ್ತೇನೆ.

ಶಿವಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಕಟ್ಟಡಗಳ ನಿರ್ವಹಣೆ.

(1373) ಶ್ರೀ ಎ.ಕೆ.ಅನಂತಕೃಷ್ಣ (ಶಿವಾಜಿನಗರ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸರ್ಕಾರಿ ಕಟ್ಟಡಗಳು ಮತ್ತು ವಸತಿ ಗೃಹಗಳು ಅಂದರೆ ಕಾರ್ಲಟನ್ ಹೌಸ್, ಕುಮಾರ ಕೃಪ, ಆರ್.ಸಿ.ಕಾಲೇಜು ಆರಕ್ಷಕ ವಸತಿ ಗೃಹಗಳು, ಕ್ರೆಸೆಂಟ್ ರಸ್ತೆಯ ವಸತಿಗಳು ಮತ್ತು ಶಾಲಾ ಕಟ್ಟಡಗಳು ಬಹಳ ಹಳೆಯದಾಗಿದ್ದು, ದುಸ್ಥಿತಿಯಲ್ಲಿದ್ದು, ವಾಸಕ್ಕೆ ಇರಲು ಬಹಳ ಅಸಾಧ್ಯವಾಗಿರುವ ಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ ವಿಧಾನ ಸಭಾ ಸದನದಲ್ಲಿ ಸಂಬಂಧಿಸಿದ ಮಂತ್ರಿಗಳು ನೀಡಿದ ಪರಿಹಾರದ ಆಶ್ವಾಸನೆ ಹಾಗೂ ಮಾನ್ಯ ಲೋಕೋಪಯೋಗಿ ಮಂತ್ರಿಗಳ ಸ್ಥಳ ಪರಿವೀಕ್ಷಣಾ ಸಮಯದಲ್ಲಿ ಕೊಟ್ಟ ಭರವಸೆ ಬಗ್ಗೆ ಗಮನ ಹರಿಸುತ್ತೀರಾ .

ಇ ಮಾನ್ಯ ಮುಖ್ಯಮಂತ್ರಿಗಳ ಮತ್ತು ಮಾನ್ಯಮಂತ್ರಿಗಳು ಸದನದಲ್ಲಿ ನೀಡಿದ ಆಶ್ವಾಸನೆ ಹಾಗೂ ಪರಿವೀಕ್ಷಣೆ ಮಾಡಿ ನೀಡಿದ ಭರವಸೆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲದಿರುವುದು ನಿಜವೇ.

ಈ ಸರ್ಕಾರವು ಭರವಸೆಯನ್ನು ಈಡೇರಿಸದಿರಲು ಕಾರಣವೇನು.

ಉ ಸರ್ಕಾರವು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಜಿ.ಹೆಚ್.ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ ಹೌದು.

ಆ ಹೌದು.

ಇ ನಿಜವಲ್ಲ. ಲಭ್ಯವಿರುವ ಅನುದಾನದಲ್ಲಿ ಕೆಲವು ಕಟ್ಟಡಗಳ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಈ ಮೇಲಿನ 'ಇ' ಪ್ರಶ್ನೆಗೆ ನೀಡಲಾದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ ಹೌದು. ಹಣದ ಲಭ್ಯತೆಯ ಆಧಾರದ ಮೇಲೆ ಮತ್ತಷ್ಟು ಕಟ್ಟಡಗಳ ದುರಸ್ತಿ ಮಾಡಲಾಗುವುದು.

ಶ್ರೀ ಎ.ಕೆ.ಅನಂತಕೃಷ್ಣ :- ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಚಿವರಿಗೆ ನನ್ನ ಕ್ಷೇತ್ರದ ಪರವಾಗಿ ಪಂದನೆಯನ್ನರ್ಪಿಸುತ್ತೇನೆ. ಸುಮಾರು ಎರಡು ವರ್ಷಕ್ಕಿಂತಲೂ ಹೆಚ್ಚು ಇದಕ್ಕೆ ಪ್ರಚಂಡ ಹೋರಾಟ ಆಗಿತ್ತು. ಈ ಸರ್ಕಾರಿ ಕಟ್ಟಡಗಳಿಗೆ ಖರ್ಚು ಮಾಡಬೇಕು ಎನ್ನುವ ವಿಷಯದಲ್ಲಿ ನಾನು ಪದೇ ಪದೇ ಕೇಳಿಕೊಳ್ಳಬೇಕಾಗಿ ಬಂತು. ಆದರೂ ಮಾನ್ಯ ಸಚಿವರು ತಮ್ಮ ಕಚೇರಿಯಲ್ಲಿ ಬರಮಾಡಿಕೊಂಡು ತೀವ್ರವಾಗಿ ಯೋಚನೆ ಮಾಡಿ ಈ ಸಾಲಿನಲ್ಲಿ ಹಣವನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಒಂದು ವಿಷಯ ನನಗೆ ಅರ್ಥವಾಗುತ್ತಾ ಇಲ್ಲ. 'Subject to availabiliy of funds, some more buildings will be repaired. ಎಂದು ಹೇಳಿದ್ದಾರೆ. ಬಹಳ ಮುಖ್ಯವಾದ ವಿಷಯ ಏನೆಂದರೆ , ಅಲ್ಲಿ ನಮ್ಮ ನೌಕರರು ಇದ್ದಾರೆ. ಅದರಲ್ಲೂ ಅಲ್ಲಿ 4ನೇ ದರ್ಜೆ ನೌಕರರೇ ಹೆಚ್ಚಾಗಿದ್ದಾರೆ. ಅವರ ಮನೆಗಳು ಕುಸಿದು ಬೀಳುವ ಸ್ಥಿತಿಯಲ್ಲಿವೆ. ಮಳೆ ಬಂದರೆ ಅವರು ಯಾರೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಕೆಲವು ಬಾಗಲು ಹಾಗೂ ಕಿಟಕಿಗಳು ಕಿತ್ತುಹೋಗಿವೆ. ಇವತ್ತು ಅಲ್ಲಿ ವೈರಿಂಗ್ ಯಾವ ರೀತಿ ಇದೆ ಎಂದರೆ ಯಾವ ಸಮಯದಲ್ಲಿ ಬೇಕಾದರೂ ಈ ಎಲೆಕ್ಟ್ರಿಕ್ಯೂಷನ್ ಆಗುವುದಕ್ಕೆ ಸಾಧ್ಯವಿದೆ. ಅಲ್ಲಿ ಬಹಳ ತೀವ್ರವಾದ ಪರಿಸ್ಥಿತಿ ಇದೆ. ಅಂತಹ ಒಂದು ವಾತಾವರಣ ಅಲ್ಲಿ ಇದೆ. ಅದು ಪೋಲೀಸ್ ಸಿಬ್ಬಂದಿ ವಾಸ ಮಾಡುತ್ತಿರುವ ಪೋಲೀಸ್ ಕ್ವಾರ್ಟರ್ಸ್ ಇರಬಹುದು, ಇಲ್ಲವೇ ಕಾರ್ಲ್‌ಟನ್ ಹೌಸ್‌ನಲ್ಲಿ ಇರುವವರು ಇರಬಹುದು. ಅಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವಾಗ ಕುಸಿದು ಬೀಳುತ್ತದೆ, ಯಾವಾಗ ಎಲೆಕ್ಟ್ರಿಕ್ಯೂಷನ್ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಟಾಪ್ ಪ್ರಯಾರಿಟಿಯಲ್ಲಿ ಅಲ್ಲಿ ತಕ್ಷಣ ರಿಪೇರಿ ಕೆಲಸ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅವರಿಗೆ ಬಂಗಲೆ ಕಟ್ಟಿಸಿಕೊಡಿ ಅಥವಾ ಅವರಿಗೆ ವಾಸಕ್ಕೆ ಪ್ರತ್ಯೇಕವಾಗಿ ದೊಡ್ಡ ದೊಡ್ಡ ಮನೆಗಳನ್ನು ಮಾಡಿ ಕೊಡಿ ಎಂದು ಹೇಳುತ್ತಾ ಇಲ್ಲ. ಹಣ ಇದ್ದರೆ ಮಾಡುತ್ತೇವೆಂದರೆ ಹೇಗೆ ? ಇಲ್ಲವೇ ಅವರನ್ನು ಸ್ಥಳಾಂತರ ಮಾಡಿ ಬೇರೆ ಒಳ್ಳೆಯ ಜಾಗಕ್ಕೆ ಕಳುಹಿಸಿಕೊಡಬೇಕು, ಇಲ್ಲದಿದ್ದರೆ ತಕ್ಷಣ ರಿಪೇರಿ ಮಾಡಬೇಕು. ಇಲ್ಲವೇ ಸೈಟುಗಳನ್ನು ಏನೋ ಮಾಡಿ ಕೊಟ್ಟು ಅವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದೇ ಜಾಗದಲ್ಲಿ ಇದ್ದರೆ ಅವರು ಜೀವಸಹಿತ ಇರುವುದಕ್ಕೆ ಕಷ್ಟವಾಗುತ್ತದೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇವತ್ತು ಇನ್ನೊಂದು ವಿಷಯವನ್ನು ಹೇಳುತ್ತೇನೆ. ಅದು ಪೋಲೀಸ್ ಸ್ಟೇಷನ್‌ಗಳ ವಿಚಾರ . ಇವತ್ತು ಬ್ರಾಡ್‌ವೇ ಪೋಲೀಸ್ ಸ್ಟೇಷನ್‌ನಲ್ಲಿ ಒಳಗಡೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಪೋಲೀಸ್ ಸ್ಟೇಷನ್ ಲಾಕಪ್‌ಗಳ ಅನುಭವ ನನಗೆ ಬಹಳ ಕಾಲದಿಂದ ಇದೆ. ತಮಗೂ ಇದು ಗೊತ್ತಿದೆ. ಪೋಲೀಸ್ ಲಾಕಪ್‌ನಲ್ಲಿ ಎಷ್ಟು ಕತ್ತಲು ಇರುತ್ತದೆ ಎಂದರೆ ಒಳಗಡೆ ಇರುವವರನ್ನು ಹೊರಗಡೆಯಿಂದ ನೋಡಿದರೆ ಕಾಣುವುದಿಲ್ಲ. ಹಾಗೆಯೇ ಕಮರ್ಶಿಲ್ ಸ್ಟ್ರೀಟ್ ಪೋಲೀಸಸ್ಟೇಷನ್ ಲಾಕಪ್ ಕೂಡ ಅದೇ ಗತಿಯಲ್ಲಿ ಇದೆ. ಅಲ್ಲಿ ಕೊಡಿ ಬಿದ್ದುಹೋಗುವ ಸ್ಥಿತಿಯಲ್ಲಿ ಇದೆ.

MR. SPEAKER :- Question, question.

ಶ್ರೀ ಎ.ಕೆ.ಅನಂತಕೃಷ್ಣ :- ಪ್ರಶ್ನೆ ಹಾಕಿದ್ದೇನೆ. ಇವತ್ತು Subject to availability of funds ಎಂದರೆ , ಅಂತಹ ಕಡೆ ಯಾವ ರೀತಿ ನಾವು ಆ ಜನರನ್ನು ಇಡುವುದಕ್ಕೆ ಸಾಧ್ಯವಾಗುತ್ತದೆ ? ಅದರಲ್ಲಿ ಖೈದಿಗಳಾಗಿರಲಿ, ನಮ್ಮಂಥ ಪೊಲಿಟಿಕಲ್ ಆಕ್ಟಿವಿಸ್ಟ್ಸ್ ಅಲ್ಲಿ ಹೇಗೆ ಇರುವುದಕ್ಕೆ ಸಾಧ್ಯವಾಗುತ್ತದೆ ? ಅದನ್ನು ಸರಿಮಾಡಬೇಕೆಂದು ಹೇಳುತ್ತೇನೆ. ಮತ್ತೆ

ಬ್ರಾಡ್‌ವೇ ಮತ್ತು ಕಮರ್ಶಿಯಲ್ ಸ್ಟ್ರೀಟ್ ಪೋಲೀಸ್ ಸ್ಟೇಷನ್‌ನಲ್ಲಿ ಬಹಳ ಹೆಚ್ಚು ಬೆಲೆ ಬರುವ ಜಾಗ ಇದೆ. ಅಲ್ಲಿ ಇವತ್ತು ಹೋಟೆಲು ಮುಂತಾದ ಮಲ್ಟಿಪರ್‌ಪಸ್ ಉಪಯೋಗವಾಗುವ ಕಟ್ಟಡವನ್ನು ಕಟ್ಟಬಹುದು. ಇವತ್ತು ಅಲ್ಲಿ ಮಲ್ಟಿಪರ್‌ಪಸ್ ಸ್ಕೀಮ್ ಮಾಡಿ ಹಣ ಖರ್ಚು ಮಾಡಿ ಕಟ್ಟಿಡ ಕಟ್ಟಿದರೆ ತಾನಾಗಿಯೇ ಫಂಡ್ಸ್ ಜನರೇಟ್ ಮಾಡುವ ಕಾಂಪ್ಲೆಕ್ಸ್ ಮಾಡುವುದಕ್ಕೆ ಅನುಕೂಲ ಇದೆ. ಅದನ್ನು ತೀವ್ರವಾಗಿ ಯೋಜನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಬಹಳ ಗಂಭೀರವಾಗಿ ಆಲೋಚನೆ ಮಾಡಿ ನಮ್ಮ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಸುಮಾರು 7 ಲಕ್ಷ ರೂಪಾಯಿ ಕೆಲಸವನ್ನು ಮಾಡಿಸುತ್ತಿದ್ದೇವೆ. ಸುಮಾರು 29 ಲಕ್ಷ ರೂಪಾಯಿಗೆ ಎಲ್ಲಾ ಎಸ್ಟಿಮೇಟ್ ಮಾಡಿಸಿದ್ದೇವೆ. ಅಷ್ಟು ಹಣ ಬೇಕಾಗುತ್ತದೆ. ಆ ಕೆಲಸವನ್ನು ತೀವ್ರಗತಿಯಲ್ಲಿ ಈ ವರ್ಷ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. Subject to availability of funds. ಎಂದು ಹೇಳಿದ್ದೇನೆ. ಆದರೂ ಈ 29 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಎಲ್ಲಾ ಕೂಡ ರಿಪೇರಿಯಾಗುತ್ತದೆ. ಆ ಕೆಲಸವನ್ನು ಮಾಡುವುದಕ್ಕೆ ನಾನು ಒಪ್ಪಿಗೆ ಕೊಟ್ಟಿದ್ದೇನೆ. ಮತ್ತೆ ಲಾಕಪ್ ವಿಷಯ ಹೇಳಿದ್ದಾರೆ. ಆಮೇಲೆ ಪೋಲೀಸ್ ಸ್ಟೇಷನ್ ಇರುವ ಜಾಗದಲ್ಲಿ ಮಲ್ಟಿಪರ್‌ಪಸ್ ಬಿಲ್ಡಿಂಗ್ ಕಟ್ಟಿದರೆ ಅದರಿಂದ ಬಾಡಿಗೆ ಬರುತ್ತದೆ ಫಂಡ್ಸ್ ಜನರೇಟ್ ಆಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಕೂಡ ತ್ವರಿತವಾಗಿ ಪರಿಶೀಲಿಸಿ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಮಲಖೇಡ ರಬ್ಬನಪಲ್ಲಿ ಮತ್ತಿತರ ರಸ್ತೆಗಳ ದುರಸ್ತಿಗೆ ಖರ್ಚಾದ ಹಣ.

(274)ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ):- ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿವರೆ.

ಅ ಮಲಖೇಡ ರಬ್ಬನಪಲ್ಲಿ, ಮಲಖೇಡ ರಾಜಶ್ರೀ ಸಿಮೆಂಟ್ ಕ್ರಾಸ್‌ವರೆಗೆ ಹಾಗೂ ಸೇಡಂ ಕೊಡ್ಲಾ ಹಂದ್ರಿಕವರೆಗೆ 90-91, 91-92 ನೇ ಸಾಲಿನ ಜನವರಿ ತಿಂಗಳವರೆಗೆ ರಸ್ತೆ ದುರಸ್ತಿಗೆ ಆಗಿರುವ ಖರ್ಚು ಎಷ್ಟು .

ಆ ಹಣ ಖರ್ಚು ಮಾಡಿದರೂ ಸಹ ದೊಡ್ಡ ತಗ್ಗುಗಳು ಇದ್ದು, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಲು ಕಾರಣವೇನು.

ಇ ಹಣ ಖರ್ಚು ಆದರೂ ಸಹ ಕೆಲಸ ಸರಿಯಾಗಿ ನಡೆಯದಿರುವ ಬಗ್ಗೆ ಮೇಲಾಧಿಕಾರಿಗಳಿಂದ ವಿಚಾರಣೆಮಾಡಿಸಲಾಗುವುದೆ, ಮತ್ತು ಇವರ ಮೇಲೆ ಕ್ರಮ ಯಾವಾಗ ಕೈಗೊಳ್ಳಲಾಗುವುದು.

ಈ ಈ ರಸ್ತೆಗಳ ದುರಸ್ತಿಗಾಗಿ ಟೆಂಡರ್ ಕೆಲಸಗಳನ್ನು ಗುತ್ತಿಗೆದಾರರು ಪೂರ್ತಿ ಮಾಡುವ 1-2 ವರ್ಷಗಳವರೆಗೆ ಇವುಗಳ ದುರಸ್ತಿ ಮಾಡಿ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲಾಗುವುದೆ.

ಉ ಈ ರಸ್ತೆಗಳನ್ನು ಯಾವಾಗ ದುರಸ್ತಿ ಮಾಡಲಾಗುವುದು ಹಾಗೂ ಒಂದು ವೇಳೆ 90-91ನೇ ಸಾಲಿನಲ್ಲಿ ಸುಳ್ಳು ಖರ್ಚು ತೋರಿಸಿದಂತೆ ಆದರೆ ಇದರಿಂದ ಸಂಚಾರಕ್ಕೆ ಉಪಯೋಗವೇನು.

ಊ ಇದನ್ನು ತಡೆಗಟ್ಟಲು 90-91ನೇ ಸಾಲಿನ ಹಣ ಸತ್ಯಕ್ಕೆ ದೂರವಾದ ಖರ್ಚನ್ನು ಸರ್ಕಾರದವರು ಸಿ.ಓ.ಡಿ.ಯಿಂದ ತನಿಖೆ ಮಾಡಿಸುವುದೆ ?